# ರಾಮುವಿನ ಕಥೆ

ಒಂದು ಕಥೆಯನ್ನು ಆಧಾರವಾಗಿಟ್ಟುಕೊಂಡು ಗಹನ ಆಧ್ಯಾತ್ಮಿಕ ತತ್ತ್ವವನ್ನು ವಿವರಿಸಿರುವ ಸ್ವಾಮಿ ಸುನಿರ್ಮಲಾನಂದರು ಆಂಗ್ಲ ಮಾಸಪತ್ರಿಕೆಯಾದ "ಪ್ರಬುದ್ಧ ಭಾರತ"ದ ಸಂಪಾದಕರಾಗಿರುವರು. ಅವರ ಹಲವಾರು ಸಣ್ಣ ಕಥೆಗಳು ಮತ್ತು ಲೇಖನಗಳು ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

**ನಮ್ಮ ಹಳ್ಳಿಯ** ಪುರೋಹಿತರ ಮಗ ರಾಮು ಬಹಳ ಒಳ್ಳೇ ಹುಡುಗ. ರಾತ್ರಿ ಹುಟ್ಟಿದ್ದರಿಂದ ಸ್ವಲ್ಪ ಕಾಗೆ ಬಣ್ಣ ಆದರೇನು? ಎಸ್.ಎಸ್.ಎಲ್.ಸಿ.ಯಲ್ಲಿ ಮೂರು ಸಾರಿ ಮುಗ್ಗರಿಸಿದ್ದರೇನು? ಹುಡುಗ ಬಹಳ ಜಾಣ ಮತ್ತು ಭಕ್ತ ಕೂಡ. ನಮ್ಮ ಜನರಿಗೆ ಹೀಯಾಳಿಸುವುದೆಂದರೆ ಹಾಲು ಕುಡಿದಂತೆ ತೃಪ್ತಿ. ರಾಮುವನ್ನು ರೇಗಿಸುವುದೇ ಕೆಲವರಿಗೆ ಕೆಲಸವೋ ಏನೋ ಅಂತ ತೋರುತ್ತಿತ್ತು. ಪಾಪ, ರಾಮು ಹಲ್ಲು ಕಿತ್ತ ಹಾವಿನಂತೆ ಅಥವಾ ಏನೂ ತಿಳಿಯದ ಮೂಕ ಹಸುವಿನಂತೆ. ಚಿಕ್ಕ ಹುಡುಗನಾಗಿದ್ದಾಗ ರಾಮುವಿಗೆ ಡಾಕ್ಟರಾಗುವ ಆಸೆ ಬಹಳ ಇತ್ತಂತೆ. ಎಲ್ಲರಿಗೂ ಹೇಳ್ತಿದ್ದನಂತೆ, "ನಾನು ದೊಡ್ಡವನಾದ್ರೆ ಡಾಕ್ಟರಾಗಿ ನಿಂಗೆ ಇಂಗ್ಜೆಕ್ಷನ್ ಕೊಡ್ತೀನಿ. ಹಾರೋ ಪ್ಲೇನಲ್ಲಿ ಅಮೆರಿಕಾಗೆ ಹೋಗಿ ಲಂಡನ್ನಲ್ಲಿ ಓದ್ತೀನಿ" ಅಂತ.

ಎಸ್.ಎಸ್.ಎಲ್.ಸಿ. ಎಂಬ ಭೂತವನ್ನು ಯಾವ ಬ್ರಹ್ಮ ಸೃಷ್ಟಿಸಿದನೋ ಏನೋ! ಪಾಪ, ರಾಮುವಿಗೆ ಡಾಕ್ಟರೀ ಓದುವ ರಸ್ತೆಯಲ್ಲಿ ದೊಡ್ಡ ಬಂಡೆ ಹಾಕಿದಂತೆ ಆಗಿತ್ತು. ಈ ವಿಚಿತ್ರ ಭೂತ ಅವನ ಉತ್ಸಾಹವನ್ನೆಲ್ಲ ಕಬಳಿಸಿಹಾಕಿತು. ಎಷ್ಟೋ ಸಹಸ್ರ ರೋಗಿಗಳ ಸೇವೆ ಆಗುತ್ತಿತ್ತು ಇವನು ಡಾಕ್ಟರಾಗಿದ್ದರೆ. ವಿಧಿಯ ಬರಹ ಬೇರೆಯಾಗಿತ್ತು. ಜನತೆ ಪುಣ್ಯಮಾಡಿರದಿದ್ದರೆ ರಾಮುವಿನದೇನು ತಪ್ಪು?

ರಾಮುವಿನ ತಾಯಿ ಬಹಳ ವೈಜ್ಞಾನಿಕ ವ್ಯಕ್ತಿ. ಅವರಿಗೆ ಎಲ್ಲವೂ ವೈಜ್ಞಾನಿಕವಾಗಿರಬೇಕು. ಎಲ್ಲವೂ ಪ್ರ್ಯಾಕ್ಟಿಕಲ್ ಆಗಿರಬೇಕು. ಅವರ ಮಾತೂಕತೆಗಳೂ ಪ್ರ್ಯಾಕ್ಟಿಕಲ್. ಆದರೆ ಈ ಪ್ರ್ಯಾಕ್ಟಿಕಲ್ ಸ್ವಭಾವ ಎಲ್ಲಾ ಸಮಯದಲ್ಲೂ ಮುಂದೆ ಬಂದರೆ ಸರಿಯಲ್ಲ. ಮಗ ನಾಲ್ಕನೇ ಸಾರಿ ಎಸ್.ಎಸ್.ಎಲ್.ಸಿ. ಓದಲು ಉತ್ಸಾಹ ತೋರಿಸಿದರೆ, "ಕತ್ತೆ! ನಿನ್ ತಲೆಗೆ ವಿದ್ಯೆ ಒಲಿಯೋದಿಲ್ಲ. ನಡಿ, ನಡಿ! ನಿಮ್ಮಪ್ಪನ ಹಾಗೆ ಗಂಟೆ ಬಾರಿಸು!" ಎಂದು ಹೇಳುವುದೇ! ಇಲ್ಲಿ ಏನಿದೆ ಪ್ರ್ಯಾಕ್ಟಿಕಲ್ ದೃಷ್ಟಿ? ಎಲ್ಲಾದರೂ ಕಪ್ಪು ಬಣ್ಣದ ಕತ್ತೆ ಇದೆಯೇ? ರಾಮು ಕಪ್ಪೆಂದು ಆಗಲೇ ಹೇಳಿದ್ದೇವೆ.

ಅದೇನೇ ಇರಲಿ, ತಾಯ ಆಶೀರ್ವಾದ ಪಡೆದು ಪಿತ್ರಾರ್ಜಿತ ಕರ್ಮವಾದ ಗಣಪತಿ ಮಂದಿರದ ಪೂಜೆ ಪ್ರಾರಂಭಿಸಿಯೇ ಬಿಟ್ಟ ರಾಮು. ಬಹಳ ಶ್ರದ್ಧೆ. ಭಕ್ತಿಯೂ ಬಹಳವೇ ಇತ್ತು. ಯಾವಾಗಲೂ ಗಣಪತಿ ಇವನಿಗೆ ಏನಾದರೂ ಪವಾಡ ತೋರಿಸಿಯೇ ತೀರುತ್ತಾನೆಂಬ ಆಸೆ ರಾಮುವಿನಲ್ಲಿತ್ತು. "ಡಾಕ್ಟರ್ ಲೈನ್‌ನಲ್ಲಿ ಎಸ್.ಎಸ್.ಎಲ್.ಸಿ. ಭೂತ ನಿಂತರೇನು, ಭವರೋಗ ವೈದ್ಯನಾಗೋಣ," ಎಂದೇ ಅವನ ಇಚ್ಛೆ. ಹಾಗೆಂದರೆ? ಗಣಪತಿ ಏನಾದರೂ ಪವಾಡ ತೋರಿಸಿದನೆಂದರೆ ಮುಗಿಯಿತು, ಮರುದಿನದಿಂದಲೆ ರಾಮು ಯೋಗಿ ರಾಮಚಂದ್ರಯ್ಯ ಆಗಬಲ್ಲ! ರೋಗ ದೂರಮಾಡಬಲ್ಲ! ಜನರ ಸೇವೆ ಮಾಡಬಲ್ಲ! ಎಂಥಾ ಬೃಹತ್ತಾದ ಮನಸ್ಸು ರಾಮುವಿನದು! ಹೀಯಾಳಿಸುವವರು ಹೀಯಾಳಿಸಲಿ! ನಾವು ಆ ವ್ಯಕ್ತಿಯ ಹೃದಯವನ್ನು ನೋಡೋಣ.

ಒಂದು ದಿನ ನಡೆದೇ ಹೋಯಿತು ಘಟನೆ! ಅದ್ಭುತ! ರೋಮಾಂಚಕಾರೀ ಎಂದರೆ ಕಡಿಮೆಯೇ ಹೇಳಿದಂತೆ! ರಾಮು ನಿತ್ಯವೂ ಹಿಂದಿನ ರಾತ್ರಿ ಮಂದಿರದ ಬಾಗಿಲನ್ನು ಮುಚ್ಚುವ ಮೊದಲು ದೀಪದ ಬತ್ತಿಗಳನ್ನು ರೆಡಿ ಮಾಡಿ ಹೋಗುವ ಅಭ್ಯಾಸ ಮಾಡಿಕೊಂಡಿದ್ದ. ಮಾರನೆಯ ದಿನ ಬೆಳಿಗ್ಗೆ ಬಾಗಿಲು ತೆರೆದು ಬೆಂಕಿಕಡ್ಡಿ ಗೀಚಿದರೆ ಬೆಳಕು! ಕತ್ತಲಲ್ಲಿ ಬತ್ತಿಗಾಗಿ ತಡಕಾಡಬೇಕಿರಲಿಲ್ಲ. ಇದೇ ಅವನ ಅಭ್ಯಾಸ.

ಆ ದಿನ ಬೆಳಿಗ್ಗೆ ರಾಮು ಮಂದಿರದ ಬಾಗಿಲನ್ನು ತೆಗೆದು ಬೆಂಕಿಕಡ್ಡಿ ಹಚ್ಚಿದ. "ಅರೆ! ಇದೇನು? ದೀಪದ ಬತ್ತಿ ಎಲ್ಲಿ? ಹಿಂದಿನ ರಾತ್ರಿ ಬತ್ತಿ ಇಡಲು ಮರೆತೆನೇ?" ಇಲ್ಲ! ಎಣ್ಣೆ ಇದೆ, ಬತ್ತಿ ಇಲ್ಲ. ರಾಮು, "ಗಣಪತಿ! ಏನು ಲೀಲೆಯಪ್ಪಾ!" ಎನ್ನುತ್ತಾ ಬತ್ತಿ ಹುಡುಕಲು ಶುರು ಮಾಡಿದ.

ಲೀಲೆ! ಲೀಲೆ! ಪವಾಡ! ಗಣಪತಿಯ ವಿಗ್ರಹದ ಹಿಂದೆ ಇಲಿಯ ಮೂರ್ತಿಯ ಬಳಿ ಬಿದ್ದಿದೆ ದೀಪದ ಬತ್ತಿ! ರಾಮುವಿಗೆ ಹುಚ್ಚು ಹಿಡಿಯುವುದೊಂದೇ ಬಾಕಿ! ಒಂದೇ ನಿಮಿಷದಲ್ಲಿ ಕಣ್ಣೆದುರು ಪಲ್ಲಕ್ಕಿ, ಸಾವಿರಾರು ಜನ ಭಕ್ತರ ಲೈನ್, ಲಕ್ಷಾಂತರ ರೂಪಾಯಿ, ದೇಶ ವಿದೇಶದಲ್ಲಿ ಪೂಜೆ—ಎಲ್ಲಾ ಹಾದುಹೋಯಿತು. ಹಠಾತ್ ಜಗದ್ಗುರುವಾದಾಗ ಪರಿಸ್ಥಿತಿ ಹೇಗಿರಬೇಕು!

ಮೂರು ಸಾರಿ ಎಸ್. ಎಸ್. ಎಲ್. ಸಿ. ಫೇಲಾದುದೂ ದೈವೇಚ್ಛೆ. ಭಗವಂತನಿಗೆ ಭವರೋಗವೈದ್ಯನನ್ನು ಸಾಧಾರಣ ವೈದ್ಯ ಮಾಡುವ ಇಚ್ಛೆ ಇರಲಿಲ್ಲ. ಈಗ ಇದು ರಾಮುವಿಗೆ ಸ್ಪಷ್ಟವಾಯಿತು.

ಮೈಯಲ್ಲಿ ರೋಮಾಂಚನ! ರಾಮುವಿನ ಎದೆ ಹಳ್ಳಿಗೇ ಕೇಳುವಷ್ಟು ಜೋರಾಗಿ ಬಡಿಯುತ್ತಿದೆ. "ದಿವ್ಯೋನ್ಮಾದ ಬಂದ ಪ್ರಥಮ ದಿನ" ಎಂದು ಬರೆದು ಅದರ ಕೆಳಗೆ ತಾರೀಖು ಬರೆದ ರಾಮು. ಅದರ ಕೆಳಗೆ "ರಾಮಚಂದ್ರಗುರು" ಎಂದು ಸಹಿ ಹಾಕಿದ. ಮುಂದೆ ಜೀವನ ಚರಿತ್ರೆ

ಬರೆಯುವವರಿಗೆ ಉಪಕಾರ ಮಾಡಲು ಪ್ರಾರಂಭಿಸಿದ. ರಾಮು ಜಾಣ ತಾನೆ?

"ಎಲ್ಲರಿಗೂ ಈಗಲೇ ಹೇಳಲೇ?" ಒಂದೆರಡು ನಿಮಿಷ ಯೋಚಿಸಿದ. ರಾಮು ಎಷ್ಟಾದರೂ ಒದು ಬಲ್ಲ ವ್ಯಕ್ತಿ. ಆವೇಗವನ್ನು ತಡೆದುಕೊಳ್ಳಲು ಕಷ್ಟವಾದರೂ ತಡೆದುಕೊಂಡ. ಸತ್ಪಾತ್ರರು ಬೇಕು! ಯಾರಿಗೆ ಅಂದರೆ ಅವರಿಗೆ ತಾನು ಜಗದ್ಗುರುವಾದ ವಿಚಾರ ಹೇಳುವುದು ಸರಿಯಲ್ಲ. ಪಕ್ಕದ ಮನೆಯ ಎಪ್ಪತ್ತು ವರ್ಷದ ಮುದುಕಿ ಬೆಳಿಗ್ಗೆ ಬರುತ್ತಾರೆ. ಅವರಿಗೆ ಹೇಳಿದರೆ "ರಾಮಚಂದ್ರ ಗುರುಗಳ ಪ್ರಥಮ ಶಿಷ್ಯೆ." ಎಂದು ಜಗತ್ತು ಹೇಳುತ್ತದೆ. ಛೀ! ಛೀ! ಆ ಹರಕು ಬಾಯಿನ ಮುದುಕಿ ಪ್ರಥಮ ಶಿಷ್ಯಳೇ!

ಅಂದು ರಾಮು ಹೇಗೆ ಪೂಜೆ ಮುಗಿಸಿದನೋ ಗಣಪತಿಯೇ ಬಲ್ಲ. ಆ ದಿನ ಬತ್ತಿಯನ್ನು ಸರಿಯಾಗಿ ಇಟ್ಟು, ಬೇಗ ಬಾಗಿಲು ಹಾಕಿಕೊಂಡು ಮನೆಗೆ ಹಿಂತಿರುಗಿದ. ಹೇಳಲೋ, ಬೇಡವೋ ಎಂದು ಚಿಂತಿಸಿ ಒಂದಿಬ್ಬರಿಗೆ "ಒಂದು ಅದ್ಭುತ ಘಟನೆಯಾಗ್ತಿದೆ," ಎಂದ. "ನಿಂದ್ಯಾವಾಗಲೂ ಅದ್ಭುತಾನೇ," ಎಂದು ಕೇಳಿದವರು ಮೂಗು ಮುರಿದಾಗ ರಾಮು ಪೆಚ್ಚಾದ. ಇಡೀ ರಾತ್ರಿ ಎದ್ದು ಕೆಲವೊಂದು ಉಪದೇಶವಾಕ್ಯಗಳನ್ನು ಗಟ್ಟು ಮಾಡಿದ.

ಮಾರನೇ ದಿನವೂ ಅದೇ ಪವಾಡ! ದೀಪದ ಬತ್ತಿ ಇಲ್ಲ! ಅದು ಹಿಂದಿನ ದಿನದಂತೆ ಇಲಿಯ ವಿಗ್ರಹದ ಬಳಿ! ರಾಮು ಮೂರ್ಛೆ ಹೋದ. ಎದ್ದು ಗೋಡೆಯ ಮೇಲೆ "ಮೊದಲನೇ ನಿರ್ವಿಕಲ್ಪ ಸಮಾಧಿ" ಎಂದು ತಾರೀಖು ಬರೆದ.

ಇನ್ನು ಸಂದೇಹ ಉಳಿಯಲಿಲ್ಲ. ತನ್ನನ್ನು ಜಗದ್ಗುರು ಮಾಡಲೆಂದು ಗಣಪತಿ ದೀಪದ ಬತ್ತಿಯ ಪವಾಡ ಮಾಡುತ್ತಿದ್ದಾನೆ. ಆಹಾ! ಲಕ್ಷಾಂತರ ಜನರನ್ನು ಉದ್ಧಾರ ಮಾಡಬಹುದು!

ಜಗದ್ಗುರು ಹೇಗೆಂದರೆ ಹಾಗೆ ಇರಬಾರದು. ಏನೆಂದರೆ ಅದನ್ನು ಮಾಡಬಾರದು. ಮೊದಲು ತಾಯಿಗೆ ನಮಸ್ಕರಿಸಿ ಜಗದ್ಗುರುವಿನ ಪಟ್ಟ ಏರಬೇಕು. ರಾಮು ಮನೆಗೆ ಬಂದು ಅವನ ತಾಯಿಗೆ ಸಾಷ್ಟಾಂಗ ಪ್ರಣಾಮ ಮಾಡಿದ. ತಾಯಿ ರೇಗಿಬಿಟ್ಟರು. "ನಿನ್ಗೇನ್ ಬಂತೋ? ಹಠಾತ್ತಾಗಿ ಕಾಲಿಗ್ ಬೀಳ್ತಾ ಇದ್ದೀಯಾ? ಮಂದಿರದಲ್ಲಿ ಯಾರ್ ನುಗ್ಗಿ ಏನ್ ಮಾಡ್ತಿದ್ದಾರೋ ಗೊತ್ತಿಲ್ಲ. ಇಲ್ಲಿ ಬಂದ! ಹೊರಡೋ! ಹೊರಡೋ!"

ಜಗದ್ಗುರುಗಳ ಹತ್ತಿರ ಅಜ್ಞಾನಿಗಳೇ ಬರುವುದು. ಹಾಗಾಗಿ ರಾಮು ಹೆದರಲಿಲ್ಲ. ತಾಯಿಗೆ ಶುಭ ಸುದ್ದಿ ಹೇಳಿ ಜಗದ್ಗುರುಗಳ ತಾಯಿಯಾದ ಹೆಮ್ಮೆಯ ಮಾತು ತಿಳಿಸಿದರೆ ಕೋಪವೆಲ್ಲ ತಣ್ಣಗಾಗುತ್ತದೆ ಎಂದು ನಿರ್ಧರಿಸಿ ರಾಮು ಗಂಟಲು ಸರಿಮಾಡಿಕೊಂಡು ಹೇಳಿದ : "ಓಂ! ನಿನಗೆ ಒಂದು ಶುಭಸುದ್ದಿ. ನೀನು ಮಹಾ ಭಾಗ್ಯವತಿ! ನೀನು ಇನ್ನು ಮುಂದೆ ಜಗತ್ತಿನಲ್ಲಿ ಜಗದ್ಗುರುವಿನ ತಾಯಿ ಎಂದು ಖ್ಯಾತಿ ಹೊಂದುವೆ."

ರಾಮುವಿನ ತಾಯಿ ತಲೆಯ ಮೇಲೆ ಕೈಯಿಟ್ಟರು. "ನಿನಗೇನ್ ಬಂತೋ? ಕತ್ತೆ! ಪೆದ್‌ಪೆದ್ದಾಗಿ ಏನೇನೋ ಮಾತಾಡ್ತಿದೀಯ! ತೊಲಗೋ ಇಲ್ಲಿಂದ."

ರಾಮು ಹೆದರಲಿಲ್ಲ. ಶಾಂತನಾಗಿ ಗಣಪತಿಯ ಪವಾಡದ ಕತೆ ಹೇಳಿದ. ನಾನು ಆಗಲೇ ಹೇಳಿದ್ದೇನೆ, ರಾಮುವಿನ ತಾಯಿ ಪ್ರ್ಯಾಕ್ಟಿಕಲ್ ಮಹಿಳೆ ಎಂದು. ಘಟನೆ ಕೇಳಿ ಜೋರಾಗಿ ನಕ್ಕುಬಿಟ್ಟರು! "ಆಹಾ! ಜಗದ್ಗುರುಗಳೇ! ನನ್ ಕರ್ಮ! ಹೋಗಿ ಹೋಗಿ ಜಗದ್ಗುರುಗಳೇ! ದೇವಸ್ಥಾನದಲ್ಲಿ ಇಲಿ ಹೊಕ್ಕಿದೆ! ಅದನ್ನ ಓಡ್ಸಿ!" ಇಷ್ಟೇ ಅಲ್ಲ. ತಮಗೆ ತಾವೇ ಹೇಳಿಕೊಳ್ಳತೊಡಗಿದರು, "ನನ್ನ ವರಪುತ್ರ ಪೆದ್ದ ಅಂತ ಮಾತ್ರ ತಿಳಿದಿದ್ದೆ. ಹುಚ್ಚ ಅಂತ ಈಗ ತಿಳಿಯಿತು! ಜಗದ್ಗುರು! ಜಗದ್ಗುರು! ಎಲ್ಲ ನನ್ನ ಕರ್ಮ."

ರಾಮು ಪೆಚ್ಚಾದ. ಈಗಿನ ಕಾಲದ ವೈಜ್ಞಾನಿಕ ಮನೋವೃತ್ತಿಯವರನ್ನು ನೋಡಿದರೇ ರಾಮುವಿಗೆ ಬೇಸರ. ಎಲ್ಲದಕ್ಕೂ ವೈಜ್ಞಾನಿಕ ವಿವರಣೆ! ಛೇ! ಛೇ! ಒಂದೇ ಒಂದು ಆಧ್ಯಾತ್ಮಿಕ ವಿವರಣೆಯಿಂದ ಎಲ್ಲಿ ಜಗದ್ಗುರುವೇ ಸೃಷ್ಟಿಯಾಗಬಲ್ಲದೋ, ಅಲ್ಲಿ ಪ್ರ್ಯಾಕ್ಟಿಕಲ್ ವಿವರಣೆ ನೀಡಿ ಎಲ್ಲವನ್ನೂ ಧ್ವಂಸ ಮಾಡುತ್ತಾರೆ!

ಆಗಲಿ! ಇಲಿಯೇ ದೀಪದ ಬತ್ತಿಯನ್ನು ಎಳೆದೊಯ್ದು ಗಣಪತಿಯ ಪಾದದಲ್ಲಿ ಇಟ್ಟಿರಲಿ. ಗಣಪತಿಯೇ ಅದಕ್ಕೆ ಹಾಗೆ ಮಾಡುವ ಜ್ಞಾನ ಯಾಕೆ ಕೊಟ್ಟಿರಬಾರದು? ದೈವೀ ಪವಾಡ ಯಾಕಾಗಬಾರದು?

ರಾಮುವಿಗೆ ಬಹಳ ಕೋಪ ಬಂತು, ತಾಯಿಯ ಮೇಲೆ. ದೇವಸ್ಥಾನಕ್ಕೆ ಹಿಂದಿರುಗಿ ಮೂಲೆ ಮೂಲೆಯನ್ನೂ ತಡಕಿದಾಗ ಒಂದು ಮೂಲೆಯಿಂದ ಇನ್ನೊಂದಕ್ಕೆ ಓಡಾಡುತ್ತಿದ್ದ ಇಲಿ ಕಂಡು ಬಂತು. ಒಂದು ಗಂಟೆ ವೀರನಂತೆ ಹೋರಾಡಿ ಇಲಿಯನ್ನು ಹಿಡಿದೇ ಬಿಟ್ಟ ರಾಮು.

"ಡಾಕ್ಟರಾಗೋಣ ಅಂದ್ರೆ ಎಸ್.ಎಸ್.ಎಲ್.ಸಿ. ರಸ್ತೆಯಲ್ಲಿ ಅಡ್ಡ ಕಾಲು ಹಾಕಿತು. ಭವರೋಗವೈದ್ಯನಾಗೋಣ ಎಂದರೆ ಈ ಇಲಿ ಅಡ್ಡಿ ಮಾಡಿತು." ಕೋಪದಿಂದ ಇಲಿಯನ್ನು ಸಂಹಾರ ಮಾಡಿದ ರಾಮು. ದೇವಸ್ಥಾನದ ಗೋಡೆಯ ಮೇಲಿನ "ಮೊದಲನೇ ನಿರ್ವಿಕಲ್ಪ ಸಮಾಧಿ" ಅವನನ್ನು ಅಣಕಿಸುತ್ತಿತ್ತು.

❋ ❋ ❋ ❋ ❋ ❋ ❋

ರಾಮುವಿನ ಪರದಾಟ ನಮ್ಮೆಲ್ಲರದೂ ತಾನೇ? ನಾವೆಲ್ಲರೂ ಆಧ್ಯಾತ್ಮಿಕ ಜೀವನದಲ್ಲಿ ಎರಡು ಹೆಜ್ಜೆ ಮುಂದಿಡುವ ಮೊದಲೇ "ಅನುಭವ"ಗಳಿಗಾಗಿ ಹಾತೊರೆಯುತ್ತೇವೆ. ಸ್ವಪ್ನದಲ್ಲಿ ದೇವರ ದರ್ಶನವಾಗುವುದು, ದೇವರು ಕನಸಿನಲ್ಲಿ ಬಂದು ಮಂತ್ರದೀಕ್ಷೆ ಕೊಡುವುದು, ಕಷ್ಟಪರಿಹಾರ ಮಾಡುವುದು, ಒಂದು ದಿವ್ಯಜ್ಯೋತಿಯ ದರ್ಶನವಾಗುವುದು ಇತ್ಯಾದಿ ನೂರಾರು ರೀತಿಯ ಅನುಭೂತಿಗಳನ್ನು ನಾವು ಕಲ್ಪಿಸುತ್ತೇವೆ. ಒಬ್ಬ ಚಿಕ್ಕ ಹುಡುಗಿಯ ಕನಸಿನಲ್ಲಿ ಕೃಷ್ಣ ಬಂದು ಮಂತ್ರದೀಕ್ಷೆ ಕೊಟ್ಟನಂತೆ. ಏನು ಮಂತ್ರ ಎಂದು ಹಿರಿಯರು ಕೇಳಿದಾಗ ಹುಡುಗಿ ಹೇಳಿದಳಂತೆ: "ಅಯ್ಯೋ ರಾಮ." ಶ್ರೀಕೃಷ್ಣ ಅವಳಿಗೆ "ಅಯ್ಯೋ ರಾಮ" ಎಂಬ ಮಂತ್ರವನ್ನು ನೀಡಲು ಗೋಕುಲದಿಂದ ಕನಸಿನ ಲೋಕಕ್ಕೆ ಬಂದದ್ದು ಆಶ್ಚರ್ಯವೇನಲ್ಲ. ಎಲ್ಲವೂ ಸಂಭವ ತಾನೇ?

ಎರಡು ದಿನ ಧ್ಯಾನ ಮಾಡಿದರೆ ಸಾಕು, ಜ್ಯೋತಿ ದರ್ಶನವಾಗಬೇಕು, ದೇವರು ಬಂದು ಮಾತನಾಡಬೇಕು, ಅಡಿಗೆಯಲ್ಲಿ

ಉಪ್ಪು ಕಡಿಮೆ ಏಕಾಯಿತು ಎಂದು ವಿವರಿಸಬೇಕು. ನಮ್ಮೆಲ್ಲರ ಹೆಚ್ಚಿನಯಕೆ ಧಿಡೀರ್ ಆಧ್ಯಾತ್ಮಿಕತೆ. ಎಲ್ಲರಿಗೂ ಈಗಲೇ ಏನಾದರೂ ಆಗಬೇಕು. ಈ ಆಸೆ ಘನೀಭೂತವಾದಾಗ ಕಲ್ಪನೆಗಳ ಜಗತ್ತು ಜಾಗೃತವಾಗುತ್ತದೆ. ಭ್ರಮಗಳು (**hallucinations**) ಅಥವಾ ಹಗಲುಗನಸು (*day-dreaming*) ಎನ್ನುವ ಪ್ರಕ್ರಿಯೆ ಶುರುವಾಗುತ್ತದೆ.

ನಮ್ಮ ಕಥೆಯ ರಾಮುವಿನಂತೆ ನಾವೂ ಧ್ಯಾನದಲ್ಲಿ ದಿವ್ಯವಾದ ಬೆಳಕು ನೋಡುತ್ತೇವೆ. ಫೋಟೋದಿಂದ ಬೆಳಕು ಹೊರಬರುವುದನ್ನು ನೋಡುತ್ತೇವೆ. ಭಗವಂತ ನಮ್ಮ ಜೊತೆ ಮಾತನಾಡಲು ಶುರು ಮಾಡುತ್ತಾನೆ. ನಮ್ಮ ಉತ್ಸಾಹಕ್ಕೆ ಅಂತ್ಯವೇ ಇಲ್ಲ!

ಈ ರೀತಿ ಭ್ರಮೆ ಉಂಟಾಗಲು ಕಾರಣವೇನು? ನಾವು ಸಾಧನೆ ಸರಿಯಾಗಿ ಮಾಡುತ್ತಿಲ್ಲವೆಂಬುದೇ ಅಥವಾ ನಮ್ಮ ಆಧ್ಯಾತ್ಮಿಕ ಪಿಪಾಸೆ ಸಾಕಷ್ಟಿಲ್ಲವೆಂಬುದೇ? ಎರಡೂ ಅಲ್ಲ. ನಮ್ಮ ಪ್ರಧಾನ ಸಮಸ್ಯೆಗಳು ಎರಡು : ೧) ಸಾಧು ಸಂತರ ಜೀವನವನ್ನು ಓದಿದುದರ ಫಲವಾಗಿ ದರ್ಶನ, ಅನುಭೂತಿ ಅನುಭವಗಳು ಅತಿ ಸಹಜ ಎಂಬ ವಿಶ್ವಾಸ; ಮತ್ತು ಈ ರೀತಿಯ ಅನುಭವಗಳಿಗಾಗಿ ಹಾತೊರೆಯುವುದು; ೨) ಅನುಭವಗಳಿಂದ ಉಂಟಾಗುವ ಪ್ರಚಾರ, ಕೀರ್ತಿ—ರಾಮು ಹೇಗೆ ಜಗದ್ಗುರುವಾಗುವ ಕನಸು ಕಂಡನೋ ಹಾಗೆ—ಇವುಗಳ ಕಡೆಗೆ ದೃಷ್ಟಿ. ನಮ್ಮಲ್ಲಿ ಹೆಚ್ಚಿನವರಿಗೆ ಪ್ರಚಾರ ಮುಖ್ಯ.

ಹಾಗಾದರೆ ಅನುಭೂತಿಗಳಿಗಾಗಿ ಹಾತೊರೆಯುವುದು ತಪ್ಪೇ? ನಮ್ಮಂತಹ ಅತಿ ಸಾಧಾರಣ ಸಾಧಕ-ಸಾಧಕಿಯರು ಅನುಭೂತಿಗಾಗಿ ಹಾತೊರೆದರೆ ಅದು ತಪ್ಪು ಎಂದು ಎಲ್ಲ ಮಹಾತ್ಮರೂ ಸಾರಿಸಾರಿ ಹೇಳಿದ್ದಾರೆ. ನಮ್ಮ ಮನಸ್ಸು ಚಂಚಲ, ಮಲಿನ. ನಮಗೆ ಮೊಟ್ಟಮೊದಲು ಬೇಕಿರುವುದು ಸ್ಥಿರತೆ ಮತ್ತು ಶುದ್ಧಿ. ಪ್ರಪ್ರಥಮ ಆವಶ್ಯಕತೆಯೆಂದರೆ ನಮ್ಮ ಅಪವಿತ್ರ ಮನಸ್ಸನ್ನು ಪವಿತ್ರಗೊಳಿಸುವುದು. ನಾವು ಸಾಧಾರಣ ವ್ಯಕ್ತಿಗಳು. ನಮ್ಮ ಮನಸ್ಸುಗಳು ನಾನಾ ಆಸೆ ಆಕಾಂಕ್ಷೆಗಳ ಜಾಲದಲ್ಲಿ ಬಂಧಿಯಾಗಿದೆ. ಜನ್ಮ ಜನ್ಮಾಂತರದಲ್ಲಿ ನಾನಾರೀತಿಯ ಸುಖದ ಕಡೆಗೆ ಹರಿದಿದೆ ನಮ್ಮ ಮನಸ್ಸು. ಇಂತಹ ಮರ್ಕಟ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಲು ಈ ಕೆಲದಿನ ಅಥವಾ ವರ್ಷಗಳ ಹಿಂದೆ ತಾನೇ ಪ್ರಯತ್ನಿಸುತ್ತಿದ್ದೇವೆ. ನಮ್ಮ ಪ್ರಯತ್ನವೂ ಅತಿ ಸಾಧಾರಣವಾದುದು. ದಿನದಲ್ಲಿ ಒಂದು ಗಂಟೆಯೂ ನಿಷ್ಠೆಯಿಂದ ಜಪಧ್ಯಾನಗಳಲ್ಲಿ ಕಳೆಯಲು ನಮಗೆ ಸಾಧ್ಯವಿಲ್ಲ. ನಮಗೆ ನಾನಾ ಚಿಂತೆ, ನಾನಾ ಕೆಲಸ. ಭಗವಂತ ನಮ್ಮ ಕೊನೆಯ ಅಗತ್ಯ(*last priority*). ಹಾಗಾಗಿ ದಿನದಲ್ಲಿ ನಡೆದ ನಡೆಯುವ ಸಹಸ್ರಾರು ಘಟನೆ, ಚಿಂತೆ ಇತ್ಯಾದಿಗಳ ಬಿರುಗಾಳಿ ಬೀಸುತ್ತಿರುವ ಮನಸ್ಸಿನಿಂದ ನಾವು ಭಗವಂತನನ್ನು ಕರೆಯಲು ಪ್ರಯತ್ನಿಸುತ್ತೇವೆ. ಹತ್ತು ನಿಮಿಷ ಸ್ಥಿರವಾಗಿ ಕುಳಿತುಕೊಳ್ಳಲಾರೆವು ನಾವು. ಮನಸ್ಸೇ ನಮ್ಮನ್ನು ಎಬ್ಬಿಸಿಬಿಡುತ್ತದೆ. ಇಂತಹ ಮನಸ್ಸು ಅನುಭೂತಿ, ಅನುಭವ ಇತ್ಯಾದಿಗಳಿಗಾಗಿ ಹಾತೊರೆದರೆ ಸರಿಯೇ?

ಈ ಪರಿಸ್ಥಿತಿಯಲ್ಲಿ ನಾವು ಮಾಡಬೇಕಾದುದೇನು? ಎಲ್ಲಾ ಮಹಾತ್ಮರೂ ನಮಗೆ ಉಪದೇಶ ನೀಡುವಂತೆ ಮೊದಲು ಅಂತರಂಗ ಶುದ್ಧಿ, ನಂತರ ಅನುಭೂತಿ. ಪೂಜ್ಯ ಸ್ವಾಮಿ ಯತೀಶ್ವರಾನಂದರು ತಮ್ಮ ಬೃಹತ್ತಾದ ಆಧ್ಯಾತ್ಮಿಕ ಜಗತ್ತಿನ ಪಠ್ಯಪುಸ್ತಕ ಸಮಾನವಾದ **"ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ"**ದಲ್ಲಿ ಹೇಳುವಂತೆ ಸಾಧನೆ ಮಾಡುವವರು ದರ್ಶನ, ಅನುಭವ ಇತ್ಯಾದಿಗಳಿಗಾಗಿ ಹಾತೊರೆಯಬೇಕಿಲ್ಲ. ಸರಿಯಾದ ಸಮಯದಲ್ಲಿ ಇವುಗಳು ಬಂದೇ ಬರುತ್ತವೆ. ಒಂದು ಅನುಭವವಾಯಿತೆಂದರೆ ಇಡಿಯ ಜೀವನವೇ ಪರಿವರ್ತಿತವಾಗುತ್ತದೆ. ಸಾಧಕನಿಗೆ ಮೊದಲು ಬೇಕಿರುವುದು ಚಿತ್ತಶುದ್ಧಿ, ಮನಶ್ಶುದ್ಧಿ. ಶ್ರೀರಾಮಕೃಷ್ಣರು ಜಗನ್ಮಾತೆಯ ಬಳಿ ಹೇಗೆ ಕಳಕಳಿಯಿಂದ ಪ್ರಾರ್ಥಿಸಬೇಕು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅವರ ಆಚರಣೆಗಳೆಲ್ಲ ನಮ್ಮಂತಹ ಅತಿ ಸಾಧಾರಣ ಜನರಿಗಾಗಿಯೇ. ಅವರಿಗೆ ಅವುಗಳ ಆವಶ್ಯಕತೆಯೇನೂ ಇರಲಿಲ್ಲ. ಅವರು ತೋರಿಸಿದ ರೀತಿಯಲ್ಲಿ ನಾವೂ ಹೃದಯತುಂಬಿ, ವ್ಯಾಕುಲತೆಯಿಂದ ಪ್ರಾರ್ಥಿಸಲು ಸಾಧ್ಯವಾದರೆ ಅದೇ ಮಹಾಭಾಗ್ಯ.

ಹಾಗಾದರೆ ಕನಸಿನಲ್ಲಿ ಗುರು ಅಥವಾ ಇಷ್ಟದೇವತೆಯ ದರ್ಶನ, ದೇವದೇವಿಯರ ಸ್ವಪ್ನ, ಸಾಧುಸಂತರ ಸ್ವಪ್ನ ಇವೆಲ್ಲವೂ ಕಲ್ಪನೆಯೇ? ಹಿರಿಯರು ಹೇಳುವಂತೆ, ಇವೆಲ್ಲವೂ ಅಸತ್ಯವಿರಬಹುದು, ಆದರೆ ಅವುಗಳು ಮನಸ್ಸಿನ ಮೇಲೆ ಬೀರುವ ಪರಿಣಾಮ ಸತ್ಯ. ಒಂದು ಸಿಂಹದ ಕನಸು ಕಂಡು ಹೆದರಿ ಎಚ್ಚೆತ್ತ ಮೇಲೆಯೂ ಭಯದ ಚಿಹ್ನೆಗಳು ಉಳಿದಿರುತ್ತವೆ. ಹಾಗಾಗಿ ಸ್ವಪ್ನಗಳು ಸತ್ಯವಲ್ಲ, ಅವುಗಳಿಂದಾಗುವ ಪ್ರಭಾವಗಳು ಸತ್ಯ. ಇದರ ಅರ್ಥವೇನು? ವೃಥಾ ಸ್ವಪ್ನಗಳ ಹಿಂದೆ ಓಡುವುದನ್ನು ಬಿಡಬೇಕು.

ಕಾಲ್ಪನಿಕ ಜಗತ್ತಿನ ವಸ್ತುಗಳ ಆಸೆಯನ್ನು ಬಿಡಬೇಕು. ನಿಜವಾದ ಅನುಭವಗಳು ಸಂಭವ, ಆದರೆ, ಸಮಯ ಸಾಪೇಕ್ಷ. ಸರಿಯಾದ ಸಮಯ ಬಂದರೆ ಭಗವಂತ ಎಲ್ಲವನ್ನೂ ನೀಡುತ್ತಾನೆ.

**ನಮ್ಮ ಕರ್ತವ್ಯ? ರಾಮುವಿನಂತೆ ಜಗದ್ಗುರುಗಳಾಗುವ ಆಕಾಂಕ್ಷೆ ತ್ಯಜಿಸೋಣ. ವಿನಮ್ರ ಸಾಧಕರಾಗೋಣ. ನಮ್ಮ ಗುರು ಹಿರಿಯರು, ಸಾಧಕ ಸಿದ್ಧರು ತಿಳಿಸಿದಂತೆ ದಿನನಿತ್ಯವೂ ಕಡಿಮೆ ಎಂದರೆ ಎರಡು ಸಾರಿ ಸಾಧನೆಗೆ ಸಮಯ ನೀಡೋಣ. ನಮ್ಮ ಅಸಂಖ್ಯ ಕೆಲಸಗಳ ಮಧ್ಯೆ ಸದಾ ಭಗವಂತನನ್ನು ಸ್ಮರಿಸಲು ಪ್ರಯತ್ನಿಸೋಣ. ನಿಃಸ್ವಾರ್ಥ ಸೇವೆಯಿಂದ ಬೇಗ ಮನಶ್ಶುದ್ಧಿಯಾಗುತ್ತದೆ ಎಂದು ಹೇಳುತ್ತಾರೆ. ಸಮಯ ಸಿಕ್ಕಾಗಲೆಲ್ಲ ನಿಃಸ್ವಾರ್ಥ ಸೇವೆ ಮಾಡಲು ಪ್ರಯತ್ನಿಸೋಣ ಮತ್ತು ವ್ಯಾಕುಲತೆಯಿಂದ ಭಗವಂತನ ಕೃಪೆಗಾಗಿ ದೀನತೆಯಿಂದ ಪ್ರಾರ್ಥನೆ ಮಾಡೋಣ. ನಮ್ಮ ಚಂಚಲ ಮನಸ್ಸನ್ನು ಸ್ಥಿರಗೊಳಿಸುವಂತೆ, ಅಂತರಂಗವನ್ನು ಶುದ್ಧಮಾಡಿ ಭಗವಂತನಲ್ಲಿಯೇ ಮನಸ್ಸನ್ನು ಇಡಲು ಸಾಧ್ಯ ಮಾಡುವಂತೆ ಪ್ರಾರ್ಥಿಸೋಣ. ನಮಗೇನೂ ತಿಳಿಯದು, ನಮ್ಮನ್ನು ಸರಿಮಾಡು ಎಂದು ಭಗವಂತನನ್ನು ಬೇಡೋಣ.**

ಇದೇ ನಮ್ಮಂತಹ ವ್ಯಕ್ತಿಗಳು ಮಾಡಬಹುದಾದ ಸಾಧನೆ. ಉಳಿದುದೆಲ್ಲ ಭಗವಂತನ ಇಚ್ಛೆ. ಒಂದು ಕಿವಿ ಮಾತು: ಸಾಧಾರಣವಾಗಿ ಮನುಷ್ಯರ ಮುಂದೆ ಅಂಗಲಾಚಿದರೇ ಅವರು ಕರಗುತ್ತಾರೆ. ಇನ್ನು ದಯಾಮಯನಾದ ಭಗವಂತ ನಮ್ಮ ಕರೆಯನ್ನು ಕೇಳದೇ ಸುಮ್ಮನಿರುವನೇ? ಆದರಿಂದ, **"ತಲ್ಲಣಿಸದಿರು ಕಂಡ್ಯ ತಾಳು ಮನವೇ, ಎಲ್ಲರನು ಸಲಹುವನು, ಇದಕೆ ಸಂಶಯವಿಲ್ಲ."**

✲